ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಬಂದನಂತರ ನಮ್ಮ ತಾಲ್ಲೂಕಿನಲ್ಲಿ ಸುಮಾರು ೫ ಸಾವಿರ ಹಸಿರು ಕಾರ್ಡುಗಳ ಅವಶ್ಯಕತೆ ಇದೆಯೆಂದು, ಜಿಲ್ಲಾ ಪರಿಷತ್‌ಗೆ ಅರ್ಜಿಯನ್ನು ಕೊಟ್ಟೆವು. ಜಿಲ್ಲಾ ಪರಿಷತ್‌ನವರೂ ಸರ್ಕಾರದ ನಿಯಮದ ಪ್ರಕಾರ ಹಸಿರು ಕಾರ್ಡುಗಳನ್ನು ಕೊಡುವುದಕ್ಕೆ ಬರುವುದಿಲ್ಲ, ಇರತಕ್ಕ ಹಸಿರು ಕಾರ್ಡುಗಳನ್ನೇ ಕಡಿಮೆ ಮಾಡಲಾಗುತ್ತಿದೆ ಎಂದೂ ಹೇಳಿದ್ದಾರೆ. ೫ ಸಾವಿರ ಕಾರ್ಡುಗಳನ್ನು ಕೊಡುವುದಕ್ಕೆ ಈಗಲೇ ಆದೇಶ ಕೊಡುತ್ತೀರಾ ? ನಗರ ಸಭೆಯ ಪ್ರದೇಶಗಳಲ್ಲಿಯೂ ಹಸಿರು ಕಾರ್ಡುಗಳನ್ನು ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಯಾವ ವರ್ಗದ ಜನರಿಗೆ ಕೊಡುತ್ತೀರಿ ? ಎಷ್ಟು ಪರ್ಸೆಂಟ್ ಕೊಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ —ಈಗಾಗಲೇ ಎರಡು ಹಂತದಲ್ಲಿ ಹಸಿರು ಕಾರ್ಡುಗಳ ಸರ್ವೆ ಆಗಿದೆ. ೩೫೦೦ ರೂಪಾಯಿಂಗಳ ಒಳಗೆ ವರಮಾನ ಇರತಕ್ಕವರಿಗೆ ಹಸಿರು ಕಾರ್ಡುಗಳನ್ನು ಕೊಡಲಾಗುತ್ತಿದೆ. ಸಾಮಾನ್ಯವಾಗಿ ಎಲ್ಲಾ ಕಡೆಯೂ ಹಸಿರು ಕಾರ್ಡುಗಳನ್ನು ಕೊಡಲಾಗಿದೆ. ಇನ್ನು ೫,೦೦೦ ಜನ ಇದ್ದಾರೆಂದು ನಿರ್ದಿಷ್ಟವಾಗಿ ಸರ್ಕಾರಕ್ಕೆ ತಿಳಿಸಿದರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಪಟ್ಟಣ ಪ್ರದೇಶಗಳಲ್ಲಿ ೨೦,೦೦೦ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ಇರತಕ್ಕವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಕೊಡಂವ ಆಲೋಚನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಯಾವಾಗ ಇದನ್ನು ಇಂಪ್ಲಿಮೆಂಟ್ ಮಾಡುತ್ತೀರಿ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಸರ್ವೆ ಆದನಂತರ ಮಾಡುತ್ತೇವೆ. ತಮಗೆ ಜಿಲ್ಲಾ ಪರಿಷತ್ತಿನವರು ಅದನ್ನು ತೆಗೆದು ಇದನ್ನೂ ತೆಗೆಯಬೇಕೆಂದು ತಪ್ಪು ಅಭಿಪ್ರಾಯವನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಎಲ್ಲಿ ವಂಚಿತರಾಗಿದ್ದಾರೆ ಅಂತಹ ಕಡೆ ನಾವು ಸರ್ವೇ ಮಾಡಿಸಿದ್ದೇವೆ. ಎಲ್ಲಿ ಸಿಕ್ಕಬಾರದವರಿಗೆ ಸಿಕ್ಕಿದೆಯೋ ಅಂತಹವರಿಗೆ ತೆಗೆದುಹಾಕಿದ್ದೇವೆ.

ಶ್ರೀ ರಮೇಶ್ ಕುಮಾರ್ —''ಬಿ'' ಪ್ರಶ್ನೆಯಲ್ಲಿ ಕೆಂಪು ಪಡಿತರ ಚೀಟಿ ಎಂದು ನಮೂದು ಆಗಿದೆ ನಮಗೆ ತಿಳಿದಿರುವುದು ಹಸಿರು ಹಾಗೂ ಕೇಸರಿ ಕಾರ್ಡುಗಳು ಮಾತ್ರ. ಈ ''ಕೆಂಪು'' ಯಾವುದೂ ಎಂದು ನನಗೆ ತಿಳಿಯಲಿಲ್ಲ,

ಉತ್ತರವಿಲ್ಲ.

ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಪಡಿತರ ವ್ಯವಸ್ಥೆಯಲ್ಲಿ ತಾರತಮ್ಯ

೯೩೪. ಶ್ರೀ ಅಜ್ಜಬಾಳ ಜಿ. ಎಸ್. ಹೆಗ್ಗಡೆ (ಅಂಕೋಲ),— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಪಡಿತರ ವ್ಯವಸ್ಥೆಯಲ್ಲಿ ತಾರತಮ್ಯವಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ(ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು).—

ಅ) ಇದೆ.

ಆ) ಗ್ರಾಮೀಣ ಪ್ರದೇಶದ ಹೆಚ್ಚು ಜನರು ತಮಗೆ ಅವಶ್ಯವಿರುವ ಆಹಾರ ಧಾನ್ಯಗಳನ್ನು ಸ್ವತಃ ಬೆಳೆದುಕೊಳ್ಳುತ್ತಾರೆ. ಆದರೆ ಪಟ್ಟಣ ಪ್ರದೇಶದಲ್ಲಿ ಆಹಾರ ಧಾನ್ಯಗಳಿಗೆ ಮಾರುಕಟ್ಟೆಯನ್ನೇ ನಂಬಿಕೊಂಡಿರುವುದರಿಂದ ಪಟ್ಟಣ ಪ್ರದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಧಾನ್ಯಗಳನ್ನು ನೀಡಲಾಗುತ್ತಿದೆ.

ಶ್ರೀ ಅಜ್ಜಬಾಳ ಜಿ. ಎಸ್. ಹೆಗ್ಗಡೆ.— ನಾನು ಈ ಪ್ರಶ್ನೆ ಕೇಳಿದ ಉದ್ದೇಶ ಇಷ್ಟೇ. ಗ್ರಾಮೀಣ ಭಾಗದಲ್ಲಿ ಏನು ಕೂಲಿಕಾರರಿದ್ದಾರೆ ಅವರು ಬೆಳೆ ಬೆಳೆಯುವುದಿಲ್ಲ. ಗ್ರಾಮೀಣ ಭಾಗದಲ್ಲಿ ಬೆಳೆಯದ ಕೆಲವು ಪದಾರ್ಥಗಳನ್ನೂ ಕಡಿಮೆ ಕೊಟ್ಟಿದ್ದಾರೆ. ಉದಾಹರಣೆಗೆ ಸಕ್ಕರೆ, ಪಾಮೋಲಿನ್ ಎಣ್ಣೆಯನ್ನು ಗ್ರಾಮೀಣ ಭಾಗದಲ್ಲಿ ಕಡಿಮೆ ಕೊಟ್ಟಿದ್ದಾಳೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಮಾನ್ಯ ಅಧ್ಯಕ್ಷರೇ. ಈಗ ನಮ್ಮಲ್ಲಿ ಇರತಕ್ಕ ೮೧ ಲಕ್ಷ ಈ ಜನರಿಗೆ ಸರಿಸಮಾನವಾಗಿ ಹಂಚಬೇಕಾದರೆ ಕೇಂದ್ರ ಸರ್ಕಾರದವರು ನಮಗೆ ಆಹಾರ ಸಾಮಗ್ರಿಗಳನ್ನು ಹೆಚ್ಚು ಕೊಡಬೇಕಾಗುತ್ತದೆ. ಈಗಿರತಕ್ಕ ವ್ಯವಸ್ಥೆಯಲ್ಲಿ ನಾವು ಆಹಾರ ಸರಬರಾಜು ಮಾಡುತ್ತಿದ್ದೇವೆ. ತಾಳೆ ಎಣ್ಣೆ ಮತ್ತು ಅಕ್ಕಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಕೊಡತಕ್ಕ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಕೆ.ಜಿ.ಎಫ್ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿ ವರ್ಗ

೬೮೦. ಶ್ರೀ ಟಿ. ಎಸ್. ಮಣಿ(ಕೆ.ಜಿ.ಎಫ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ.ಜಿ.ಎಫ್. ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ದಾದಿಯರುಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಇ) ೧೯೮೭–೮೮ನೇ ಇಸವಿಯಲ್ಲಿ ಈ ಆಸ್ಪತ್ರೆಗೆ ಎಷ್ಟು ಹಣವನ್ನು ನೀಡಲಾಗಿದೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು) —

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರೂ. ೭೩,೭೫,೦೦೦–೦೦ ಗಳನ್ನು ಒದಗಿಸಲಾಗಿದೆ.

ಶ್ರೀ ಟಿ. ಎಸ್. ಮಣಿ.— ಅಧ್ಯಕ್ಷರೇ, ಕೆ.ಜಿ.ಎಫ್. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ದಾದಿಯರುಗಳ ಕೊರತೆ ಎಷ್ಟು ಪ್ರಮಾಣದಲ್ಲಿ ಇದೆ ಎನ್ನುವ ಬಗ್ಗೆ ನಾನು ವಿವರವನ್ನು ಕೊಟ್ಟರೆ, ಮಾನ್ಯ ಮಂತ್ರಿಗಳು ಅದನ್ನು ಭರ್ತಿ ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.— ಅಲ್ಲಿ ಒಬ್ಬರು ಸರ್ಜನ್ ಇರಬೇಕಾಗಿತ್ತು. ಅವರು ಅಲ್ಲಿ ಇದ್ದಾರೆ. ಹೆಲ್ತ್ ಆಫೀಸರ್ಸ್ ''ಎ'' ಗ್ರೇಡ್ ಐದು ಜನ ಇರಬೇಕಾಗಿತ್ತು. ಐದೂ ಜನ ಇದ್ದಾರೆ. ಹೆಲ್ತ್ ಆಫೀಸರ್ಸ್, ಕಮ್ ಅಸಿಸ್ಟೆಂಟ್ ಸರ್ಜನ್ಸ್ ಎಂಟು ಜನ ಇರಬೇಕಾಗಿತ್ತು. ಎಂಟು ಜನರೂ ಇದ್ದಾರೆ. ಡೆಪ್ಯುಟಿ ಡೆಂಟಲ್ ಸರ್ಜನ್ ಅವರು ಇಲ್ಲಿ ಒಬ್ಬರೂ ಇರಬೇಕಾಗಿತ್ತು, ಈಗ ನಾವು ಅವರನ್ನು ಪೋಸ್ಟ್ ಮಾಡಿದ್ದು, ಅವರೂ ಹೋಗಿದ್ದಾರೆ. ಸ್ಟಾಫ್ ನರ್ಸ್ ೨೪ರಲ್ಲಿ ೨೪ ಜನರೂ ಕೆಲಸ ಮಾಡುತ್ತಿದ್ದಾರೆ.

SRI T. S. MANI.-- The amount provided is not sufficient. Since there is heavy increase in the number of patients, will the Government see that the amount provided is atleast doubled ?

ಶ್ರೀ ಬಿ. ರಾಚಯ್ಯ.— ನನಗೆ ಹೆಚ್ಚು ಹಣಕಾಸು ಸಿಕ್ಕಿದರೆ ತಕ್ಕ ಪ್ರಮಾಣದಲ್ಲಿ ಇಲ್ಲಿಗೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಚುಕ್ಕೆ ಪ್ರಶ್ನೆ ೬೫೫, ೬೬೨, ೬೪೯ ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದಾರೆ

ಕಲಘಟಗಿಯಲ್ಲಿ ನ್ಯಾಯಾಲಯ ಪ್ರಾರಂಭಿಸುವುದು

೬೭೩. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿಯಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದೇ?

ಆ) ಹಾಗಿದ್ದಲ್ಲಿ, ಯಾವಾಗ ?